# ಕರ್ನಾಟಕ ಸರ್ಕಾರ

ಸಂ:ಎಸ್‌ಡಬ್ಲ್ಯುಎಲ್ 296 ಎಸ್ಎಡಿ 86

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ, 3ನೇ ಹಂತ,
2ನೇ ಮಹಡಿ, ಡಾ.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ 16-5-88.

## ಸುತ್ತೋಲೆ

ವಿಷಯ: ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕ ಕಣಿಯನ್ ( KANIYAN ), ಕನ್ಯನ್ ( KANYAN ) ಜನಾಂಗದವರಿಗೆ ರಾಜ್ಯದ ಇತರ ಕಡೆಗಳಲ್ಲಿ (ಪರಿಶಿಷ್ಟ ವರ್ಗ) ಜಾತಿ ಪ್ರಮಾಣ ಪತ್ರ ಕೊಡುವ ಬಗ್ಗೆ.

೦೦೦

ಭಾರತ ಸರ್ಕಾರದ ಗೃಹ ಖಾತೆ ಸಚಿವಾಲಯ, ಹೊಸದೆಹಲಿ ಇವರು ಹೊರಡಿಸಿದ ದಿನಾಂಕ 27-7-1977ರ ಪ್ರಕಟಣೆ ಸಂಖ್ಯೆ ಬಿಸಿ-12016:34:76-ಎಸ್‌ಸಿಟಿ-5ರ ನ್ವಯ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಪರಿಶಿಷ್ಟ ಪಂಗಡಗಳ ಪಟ್ಟಿಯ ಕ್ರಮ ಸಂಖ್ಯೆ 18 ರಲ್ಲಿ ಕಣಿಯನ್ ( KANIYAN ), ಕನ್ಯನ್ ( KANYAN ) ಜಾತಿಗಳು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿವೆ.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕ ಸೂರಾಪುರದ ಕಣಿಯನ್ ಸೇವಾ ಸಂಘದ ದಿನಾಂಕ 3-9-86ರ ಮನವಿ ಪತ್ರದಲ್ಲಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದು ವಿದ್ಯಾಭ್ಯಾಸ, ಉದ್ಯೋಗ ಹಾಗೂ ಸ್ವಾವಲಂಬದ ವ್ಯಾಪಾರ ಇವುಗಳನ್ನು ಮಾಡಲು ಬೇರೆ ಊರುಗಳಿಗೆ ಹೋಗಿರುವ ಕಣಿಯನ್ ಜಾತಿಗೆ ಸೇರಿದವರಿಗೆ ಅವರು ಹಾಲಿ ವಾಸವಾಗಿರುವ ಪ್ರದೇಶಗಳ ತಹಸೀಲ್ದಾರರು, ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದು ಜಾತಿ ಪ್ರಮಾಣ ಪತ್ರಗಳನ್ನು ಕೊಡುತ್ತಿಲ್ಲವಾಗಿಯೂ ಹಾಗೂ ಸದರೀ ಜನಾಂಗದವರಿಗೂ ಸಹ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ನೀಡುವಂತೆ ಕೋರಿದೆ. ಸರ್ಕಾರ ಮನವಿಯಲ್ಲಿನ ಬೇಡಿಕೆಯನ್ನು ಪರಿಶೀಲಿಸಿ ಕೆಳಕಂಡ ಸ್ಪಷ್ಟೀಕರಣವನ್ನು ನೀಡಲಾಗಿದೆ.

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ತಹಸೀಲ್ದಾರರು ಮನವಿದಾರರ ಅರ್ಜಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಮನವಿದಾರರು ಮೂಲತಹ ಕೊಳ್ಳೇಗಾಲ ತಾಲ್ಲೂಕಿನ ಕಣಿಯನ್ ( KANIYAN ), ಕನ್ಯನ್ ( KANYAN ) ಜಾತಿಗಳಿಗೆ ಸೇರಿದವರೆಂದು ಖಾತರಿ ಪಡಿಸಿಕೊಂಡು, ಪ್ರಮಾಣ ಪತ್ರಗಳನ್ನು ಕೊಡತಕ್ಕದ್ದು. ಸದರೀ ಪ್ರಮಾಣ ಪತ್ರಗಳ ಆಧಾರದ ಮೇಲೆ ರಾಜ್ಯದ ಇತರ ತಾಲ್ಲೂಕುಗಳ ತಹಸೀಲ್ದಾರರು ಮನವಿದಾರರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರಗಳನ್ನು ಕೊಡಬಹುದು.

ಡಿ.ಎಸ್. ಶಿವಸ್ವಾಮಿ 16/5/88
(ಡಿ.ಎಸ್. ಶಿವಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

ಗೆ:

1. ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಸರಕಾರಿ ಮುದ್ರಣಾಲಯ, ಬೆಂಗಳೂರು. ಇವರು ಸಾಪ್ತಾಹಿಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.
2. ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
3. ವಿಭಾಗಾಧಿಕಾರಿಗಳು
4. ಎಲ್ಲಾ ಜಿಲ್ಲಾಧಿಕಾರಿಗಳು (ತಮ್ಮ ಅಧೀನ ಅಧೀನಕಾರಿಗಳಿಗೆ ತಿಳಿಸುವಂತೆ ಕೋರಲಾಗಿದೆ.)
5. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರರುಗಳಿಗೆ.
6. ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
7. ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್.
8. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು (9) ಆರಕ್ಷಕ ಉಪ ಮಹಾನಿರೀಕ್ಷಕರು, ನಾಹಸವಿಭಾಗ, ಬೆಂಗಳೂರು.
10. ಸಾಪ್ತಾಹಿಕ ರಾಜ್ಯ ಪತ್ರ (11) ಶಾಖಾಕಡತ (12) ಪತ್ರಿಕಾಸಂಪಾದನ.

ಅರವಿನ: